ಕಥೆ

# ಕಾಡಮೂಲೆಯ ಹಾಡು



**ಚಿಂತಾಮಣಿ ಕೊಡ್ಲೆಕೆರೆ**

ಕಲೆ: ವಿಶ್ವನಾಥ್ ಎ.ಎಸ್.

ಉತ್ತರ ಕನ್ನಡದ ಗುಡ್ಡಗಾಡಿನ ಕಾಡಮೂಲೆಯ ಕವಿ ರಾನಭ ತುಂಬಾ ಪ್ರಸಿದ್ಧರೇನೂ ಅಲ್ಲ. ಹಿಂದೆಯೂ ಹಾಡುಗಳನ್ನು ಬರೆಯುತ್ತಿದ್ದರಾದರೂ ಪ್ರಕಟವಾದುದು ಕಡಿಮೆ. ಈಗ ಸಮೂಹ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ಅವರು ಹೊಸದಾಗಿ ಬರೆದ ಕವಿತೆಗಳನ್ನು ನಿಯಮಿತವಾಗಿ ಪೋಸ್ಟ್ ಮಾಡುವುದರಿಂದ ಹೊಸ ಕಾಲದ ಹುಡುಗರೂ ಅವರನ್ನು ಬಲ್ಲರು. ಹಕ್ಕಿಗಳ ಸವಿದನಿಯನ್ನೂ, ಕಾಡಿನ ಸೊಬಗನ್ನೂ ಪ್ರತ್ಯಕ್ಷ ಅನುಭವವಾಗಿಸುವ ಅದೆಂಥದೋ ಮಾಯೆ ಅವರ ಕವಿತೆಗಳಿಗಿದೆ. ಕೊಂಚ ರೂಕ್ಷ ಅನಿಸುವುದಾದರೂ ಅವರದು ಅಪ್ಪಟ ಕಾವ್ಯಪ್ರತಿಭೆ ಎಂಬುದರಲ್ಲಿ ಸಂದೇಹವಿಲ್ಲ. ರಾನಭ ಖಾದಿ ಗ್ರಾಮೋದ್ಯೋಗವೋ, ಮತ್ತೆಂಥದೋ ಒಂದು ಸರಕಾರಿ ಸೇವೆಯಲ್ಲಿದ್ದು ನಿವೃತ್ತರಾಗಿ ತಮ್ಮ ಹುಟ್ಟೂರಿಗೆ ಮರಳಿದ್ದರು. ಅದು ಅವರು ತಮ್ಮ ತಂದೆಗೆ ಕೊಟ್ಟ ಮಾತು.

ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ಕೆಲಸ ಮಾಡಿದವರು ರಾನಭ. ಬೆಂಗಳೂರಿನಲ್ಲಿ ಇವರು ಕಟ್ಟಿದ ಮನೆಯಲ್ಲೇ ಈಗ ಮಕ್ಕಳು ವಾಸಿಸುತ್ತಿದ್ದಾರೆ. ಮಡದಿಯೂ ಅಲ್ಲೇ ಇದ್ದಾರೆ. ಅವರೆಲ್ಲರಿಗೂ ಇವರು ಈ ಹಳ್ಳಿ ಊರಲ್ಲಿರುವುದು ಬೇಸರದ ಸಂಗತಿ. ಅಂದಮೇಲೆ, ಅವರೆಲ್ಲರೂ ಇಲ್ಲಿಗೆ ಬರುವುದು ದೂರವೇ ಉಳಿಯಿತು. ಕವಿಗಳೇ ತಿಂಗಳಿಗೊಮ್ಮೆ ಬೆಂಗಳೂರಿಗೆ ಬಂದು ಕುಟುಂಬದೊಡನೆ ಒಂದೆರಡು ದಿನ ಇದ್ದು ತಮ್ಮ ಗುಡ್ಡದೂರಿಗೆ ಮರಳುತ್ತಾರೆ. ಅಡುಗೆ ಮಾಡಿಕೊಳ್ಳುವುದು ಅಷ್ಟು ರೂಢಿ ಇಲ್ಲ. ಅದೃಷ್ಟವಶಾತ್ ಅವರ ಅಬ್ಬೆ ಇನ್ನೂ ಸಾಕಷ್ಟು ಚುರುಕಾಗಿಯೇ ಇದ್ದಾರೆ. ಆ ತಾಯಿಗೆ ತನ್ನ ಜೀವಿತದ ಕೊನೆಯ ವರ್ಷಗಳಲ್ಲಿ ಈ ಮಗ ಜೊತೆಗೆ ಬಂದಿರುವುದು ತುಂಬಾ ಸಂತೋಷ ತಂದಿತ್ತು. ಮುಂದಿನ ಆಯುಷ್ಯವೆಲ್ಲ ತಾನು ಇಲ್ಲೇ ಕಳೆಯುವವನು ಎಂದು ಬಂದ ದಿನವೇ ಈ ಮಗ ತಾಯಿಗೆ ಹೇಳಿಬಿಟ್ಟದ್ದರಿಂದ ಅವಳಿಗಂಟಿಕೊಂಡಿದ್ದ ಸೊಂಟನೋವು, ಜೀವನದಲ್ಲಿ ಜುಗುಪ್ಸೆ, ಬಾಯಿಗೆ ರುಚಿಯಿಲ್ಲ, ಜಠರದಲ್ಲಿ ಮಂದಾಗ್ನಿ ಮುಂತಾದ ಸಕಲ ಸಣ್ಣಪುಟ್ಟ ರೋಗಗಳೂ ಸತ್ತೂಬಿದ್ದು ಓಡಿಹೋಗಿ ಬಿಟ್ಟದ್ದವು. ಮಗನ ಜೊತೆ ಹೊಸ ಹುರುಪಿನಿಂದ ಅಬ್ಬೆ ಕಾಡೆಲ್ಲ ಅಲೆದಳು. ತಂಬುಳಿಗೆ ಉಪಯುಕ್ತವಾಗುವ ಸೊಪ್ಪುಗಳನ್ನು ಮಗನೇ

